## ಗಜಾನನ ಪ್ರಿಂಟಿಂಗ್‌ಗೆ 85 ಹರೆಯ

ಶಿವಮೊಗ್ಗ ಜಿಲ್ಲೆಯ ಸಾಗರದ ಚೊಚ್ಚಲ ಮುದ್ರಣಾಲಯವು 2019ರ ಜೂನ್ 1ಕ್ಕೆ 85 ವಸಂತಗಳನ್ನು ಪೂರೈಸಿದೆ. ಅದರ ಸಂಸ್ಥಾಪಕರಾದ ದತ್ತೋಬರಾವ್ ಬಾಪಟ್ ಸಾಗರದಲ್ಲಿ ದತ್ತಣ್ಣ ಎಂದೇ ಪ್ರಸಿದ್ಧಿ. ಸಾಗರದಲ್ಲಿ ಒಂದು ಉದ್ಯಮವನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿ ಮುಂಬೈಗೆ ಹೋಗಿ ಅಲ್ಲಿ ಅಮೆರಿಕ ದೇಶದ ಚಾಂಡ್ಲರ್ ಆ್ಯಂಡ್ ಪ್ರೈಸ್ ಕಂಪನಿಯ ಪ್ರಿಂಟಿಂಗ್ ಮತ್ತು ಕಟ್ಟಿಂಗ್ ಮಷಿನ್ ಖರೀದಿಸಿದರು. ಅವೆರಡಕ್ಕೆ ತಗುಲಿದ್ದು 3500 ರೂಪಾಯಿಗಳು, ಆದರೆ ಆ ಮುದ್ರಣಯಂತ್ರ ಸಾಗರಕ್ಕೆ ಬಂದಿದ್ದು 1 ತಿಂಗಳ ನಂತರ. 1934 ರ ಜೂನ್ 1ರಂದು ಅಂದಿನ ಬಿ. ಎಚ್. ರಸ್ತೆಯಲ್ಲಿ (ಇಂದಿನ ಜೆ ಸಿ ರಸ್ತೆ) ಗಜಾನನ ಪ್ರಿಂಟಿಂಗ್ ವರ್ಕ್ಸ್ ಪ್ರಾರಂಭಿಸಿದರು. ಸಾಗರದಲ್ಲಿ ಆಗ ವಿದ್ಯುತ್ ಇರಲಿಲ್ಲ. ಪೆಡಲ್ ಹೊಡೆದು ಪ್ರಿಂಟ್ ಮಾಡುತ್ತಿದ್ದರು.

—ಅಂಜನ್ ಎ. ಕಾಯ್ಕಿಣಿ, ಸಾಗರ






## ದೇವನೂರಿನ ಕಾವ್ಯ ಫಲಕಗಳು

ಜೈಮಿನಿ ಭಾರತವನ್ನು ಕನ್ನಡೀಕರಿಸಿದ 16ನೇ ಶತಮಾನದ ಮಹಾಕವಿ ಲಕ್ಷ್ಮೀಶನ ಹುಟ್ಟೂರು, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರು. ಇಲ್ಲಿನ ಲಕ್ಷ್ಮೀಕಾಂತ ದೇವಾಲಯದಲ್ಲಿ, ದಾನಿಗಳ ನೆರವಿನಿಂದ ಹಾಕಿರುವ ವಿಶಿಷ್ಟ ಕಾವ್ಯಫಲಕಗಳನ್ನು ದೇಗುಲದ ತುಂಬೆಲ್ಲಾ ಕಾಣಬಹುದು. ಇಲ್ಲಿ ಲಕ್ಷ್ಮೀಶನ ವಾರ್ಧಕ ಷಟ್ಪದಿಯ ವಿವಿಧ ರಸವತ್ತಾದ ಪದ್ಯಗಳನ್ನು, ಶಿಲಾ ಫಲಕಗಳಲ್ಲಿ ಕೆತ್ತಿಸಿ, ಕವಿಯ ಸ್ಮಾರಕದ ಇಕ್ಕೆಲಗಳಲ್ಲಿ ಹಾಗೂ ದೇವಸ್ಥಾನದ ಗೋಡೆಗಳಲ್ಲಿ ಹಾಕಲಾಗಿದೆ. ತನ್ನ ಆರಾಧ್ಯದೈವ ಲಕ್ಷ್ಮೀಕಾಂತನ ಸನ್ನಿಧಿಯಲ್ಲಿ ಈ ಮಹಾಕಾವ್ಯ ರಚಿಸಿದ ಕವಿ ಲಕ್ಷ್ಮೀಶನ ವಾರ್ಧಕ ಷಟ್ಪಧಿಯ ಶಬ್ದಾಲಂಕಾರದ ಗಂಭೀರ ನಡಿಗೆಯ ಕಿರು ಪರಿಚಯ ಇಲ್ಲಿಗೆ ಭೇಟಿ ನೀಡುವ ಸಾಹಿತ್ಯಾಸಕ್ತ ಪ್ರವಾಸಿಗರಿಗೆ ಸಿಗಲಿದೆ. ಇದು ದಾನಿಗಳ ಕೊಡುಗೆಯಾಗಿದ್ದು, ಕವಿಗೆ ಸಲ್ಲಿಸಿರುವ ಅತ್ಯಂತ ವಿಶಿಷ್ಟ ಗೌರವವೇ ಸರಿ. ಈ ಅನುಕರಣೀಯ ಕಾರ್ಯವನ್ನು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದವರು, ಉಡುಪಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ದೇವನೂರಿನವರೇ ಆದ ದಿವಂಗತ ಡಿ.ಆರ್.ಪಾಂಡುರಂಗ ಎಂದು ಸ್ಥಳೀಯರು ಸ್ಮರಿಸುತ್ತಾರೆ.

—ಎಚ್.ಎಸ್. ನವೀನಕುಮಾರ್, ಹೊಸದುರ್ಗ



## ವಾರಣಾಸಿಯ ಮೈಸೂರು ಘಾಟ್

ಉತ್ತರಪ್ರದೇಶದ ವಾರಣಾಸಿಗೆ ತೆರಳುವ ರಾಜ್ಯದ ಯಾತ್ರಾರ್ಥಿಗಳ ವಾಸ್ತವ್ಯಕ್ಕಾಗಿ 1928ರಲ್ಲೇ ಮೈಸೂರು ಮಹಾರಾಜರು ಕಟ್ಟಿಸಿದ ಛತ್ರದ ಚಿತ್ರವಿದು. ಈಗಲೂ ಸುಸ್ಥಿತಿಯಲ್ಲಿರುವ ಇದರಲ್ಲಿ ವಿಶಾಲವಾದ ಕೊಠಡಿಗಳ ಹಾಗೂ ವಿಹಂಗಮದ ವೀಕ್ಷಣೆಗೆ ವಿಶಾಲವಾದ ಬಾಲ್ಕನಿಗಳ ಸೌಲಭ್ಯ ಒದಗಿಸಲಾಗಿದೆ. ಗಂಗಾ ನದಿಯ ತಟದಲ್ಲಿ ಉತ್ತಮವಾದ ಸೋಪಾನಗಳುಳ್ಳ ಸ್ನಾನ ಘಟ್ಟವನ್ನೂ ಕಟ್ಟಿಸಿದ ಕಾರಣ ಈ ಘಾಟ್‌ಗೆ ಆಗ ಮೈಸೂರು ಘಾಟ್ ಎಂಬ ಹೆಸರಿತ್ತು. ಈಗ ಕರ್ನಾಟಕ ಛತ್ರ ಹಾಗೂ ಕರ್ನಾಟಕ ಘಾಟ್ ಎಂಬ ಹೆಸರಿನಿಂದ ಜನಜನಿತವಾಗಿದೆ. ಬಹುದೂರದ ಈ ಯಾತ್ರಾಸ್ಥಳದಲ್ಲಿಯೂ ಪ್ರಜಾ ಹಿತವನ್ನು ಕಾಪಾಡುವ ಸಲುವಾಗಿ ಈ ಸುವ್ಯವಸ್ಥಿತವಾದ ಛತ್ರವನ್ನು ಆ ಕಾಲದಲ್ಲಿ ಕಟ್ಟಿಸಿದವರು ನಾಲ್ಮಡಿ ಕೃಷ್ಣರಾಜ ಒಡೆಯರ್ ಅವರು. ಮಹಾರಾಜರ ದೂರ ದೃಷ್ಟಿಯ ಮತ್ತು ಪ್ರಜಾ ಪ್ರೇಮದ ಸಂಕೇತವಾಗಿ, ವಾರಣಾಸಿಯಲ್ಲಿ ನಿಂತಿವೆ ಕರ್ನಾಟಕ ಘಾಟ್ ಹಾಗೂ ಈ ಕರ್ನಾಟಕ ಛತ್ರ.

—ರಮೇಶ್ ಬಿ.ಎಂ., ಬೆಂಗಳೂರು

## ನೀವೂ ಬರೆಯಿರಿ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ, ಜೊತೆಗೆ ಆ ಬರಹಕ್ಕೆ ಸಂಬಂಧಿಸಿದ ಚಿತ್ರವೂ ಇರಲೇಬೇಕು.

ವಿಳಾಸ:
**editorsu@sudha.co.in**

**ಕಚೇರಿ ವಿಳಾಸ**
ಸಂಪಾದಕರು, 'ಸುಧಾ'
ವಾರಪತ್ರಿಕೆ, 75,
ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು– 560001